ಕರ್ನಾಟಕ ಸರ್ಕಾರ

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 : ಜುಲೈ 29, 2020

# ಮಾಧ್ಯಮ ಆಮಂತ್ರಣ

1. **ಬಿಬಿಎಂಪಿ ಪೂರ್ವ ವಲಯದ ಕೋವಿಡ್ ಚಿಕಿತ್ಸೆಗೆ ಸಂಬಂಧಿಸಿದಂತೆ ಕೈಗೊಂಡ ಸಿದ್ಧತಾ ಕ್ರಮಗಳ ಪರಿಶೀಲನೆ ಹಾಗೂ ಆಸ್ಪತ್ರೆ ಭೇಟಿ**

ವಿ. ಸೋಮಣ್ಣ, ವಸತಿ ಸಚಿವರು ಹಾಗೂ ಪೂರ್ವವಲಯ ಉಸ್ತುವಾರಿ ಸಚಿವರು

**ದಿನಾಂಕ:** 30–07–2020, ಗುರುವಾರ, **ಸಮಯ:** ಬೆಳಿಗ್ಗೆ 10:00 ಗಂಟೆಗೆ

**ಸ್ಥಳ:** ಬ್ರಾಡ್‌ವೇ ಆಸ್ಪತ್ರೆ, ಶಿವಾಜಿನಗರ, ಬೆಂಗಳೂರು.

**ಪ್ರಮಾಣ ವಚನ ಸ್ವೀಕಾರ**

2. **ಕರ್ನಾಟಕ ವಿಧಾನ ಪರಿಷತ್ತಿಗೆ ಘನತೆವೆತ್ತ ರಾಜ್ಯಪಾಲರಿಂದ ನೂತನವಾಗಿ ನಾಮನಿರ್ದೇಶನ ಹೊಂದಿರುವ ಸದಸ್ಯರುಗಳಾದ** ಸಿ.ಪಿ.ಯೋಗೇಶ್ವರ, ಅಡಗೂರು, ಹೆಚ್. ವಿಶ್ವನಾಥ್, ಶ್ರೀಮತಿ ಭಾರತಿ ಶೆಟ್ಟಿ, ಶಾಂತರಾಮ್ ಬುಡ್ನ ಸಿದ್ದಿ ಹಾಗೂ ಡಾ. ತಲವಾರ್ ಸಾಬಣ್ಣ ಅವರುಗಳ ಪ್ರಮಾಣ ವಚನ ಸ್ವೀಕಾರ ಸಮಾರಂಭ.

**ದಿನಾಂಕ:** 30–07–2020, ಗುರುವಾರ, **ಸಮಯ:** ಬೆಳಿಗ್ಗೆ 11:00 ಗಂಟೆಗೆ

**ಸ್ಥಳ:** ಸಮ್ಮೇಳನ ಸಭಾಂಗಣ, ಮೂರನೇ ಮಹಡಿ, ವಿಧಾನಸೌಧ, ಬೆಂಗಳೂರು.

# ಪತ್ರಿಕಾ ಪ್ರಕಟಣೆ

## ರೇರಾದಲ್ಲಿ ವಕೀಲರ ನೇಮಕಾತಿಗೆ ಅರ್ಜಿ ಆಹ್ವಾನ

ಬೆಂಗಳೂರು 29 ನೇ ಜುಲೈ(ಕರ್ನಾಟಕ ವಾರ್ತೆ):

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (ರೇರಾ) ದಲ್ಲಿ ಎರಡು ವರ್ಷಗಳ ಅವಧಿಗೆ ರಿಯಲ್ ಎಸ್ಟೇಟ್ ಮೇಲ್ಮನವಿ ನ್ಯಾಯಾಧೀಕರಣ, ಕರ್ನಾಟಕ ಉಚ್ಚ ನ್ಯಾಯಾಲಯ ಇವುಗಳಲ್ಲಿ ರೇರಾವನ್ನು ಪ್ರತಿನಿಧಿಸುವುದಕ್ಕಾಗಿ ವಕೀಲರ ತಂಡ (ಎಂಪಾನಲ್‌ಮೆಂಟ್) ಮಾಡಿಕೊಳ್ಳಲು ಉದ್ದೇಶಿಸಲಾಗಿದ್ದು, ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಮಾನ್ಯತೆ ಪಡೆದ ವಿಶ್ವ ವಿದ್ಯಾನಿಲಯದಲ್ಲಿ ಕಾನೂನು ಪದವಿ / ಸ್ನಾತ್ತಕೋತ್ತರ ಪದವಿ ಹೊಂದಿದ ಅಭ್ಯರ್ಥಿಗಳು, ಬಾರ್ ಕೌನ್ಸಿಲ್‌ನ ದಾಖಲೆ ಪ್ರಮಾಣ ಪತ್ರ, ವಕೀಲರ ಸಂಘದ ನೀಡಿದ ಅಭ್ಯಾಸದ ಪ್ರಮಾಣ ಪತ್ರವನ್ನು ಅರ್ಜಿಯ ಜೊತೆ ಲಗತ್ತಿಸುವುದು.

ವಿಚಾರಣಾ ನ್ಯಾಯಾಲಯ, ಮೊಲ್ಮನವಿ ನ್ಯಾಯಾಧಿಕರಣ, ಉಚ್ಚ ನ್ಯಾಯಾಲಯ ಇವುಗಳಲ್ಲಿ ಭೂಮಿ ಹಾಗೂ ಕಂದಾಯ ವಿಚಾರಗಳು, ರಿಯಲ್ ಎಸ್ಟೇಟ್, ಬಿಡಿಎ, ಬಿಬಿಎಂಪಿ ಹಾಗೂ ಇತರೆ ವಿಷಯಗಳಲ್ಲಿ ದಾವೆ, ಮೊಕದ್ದಮೆ ನಿರ್ವಹಣೆಯಲ್ಲಿ 12 ವರ್ಷಗಳಿಗೂ ಹೆಚ್ಚು ಅನುಭವ ಹೊಂದಿರುವವರು ಆಸಕ್ತಿಯುಳ್ಳ ಹಾಗೂ ಅರ್ಹ ವಕೀಲರಿಂದ ಅರ್ಜಿಗಳನ್ನು 31ನೇ ಜುಲೈ 2020 ರೊಳಗೆ ಕಾರ್ಯದರ್ಶಿ, ರೇರಾ ಇಲ್ಲಿಗೆ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ವೆಬ್ ಸೈಟ್ rera.karnataka.gov.in ಇಲ್ಲಿ ಸಂಕಪರ್ಕಿಸಬಹುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ತೆರಿಗೆ ಪಾವತಿಸದ ವಾಹನಗಳ ಸಾರ್ವಜನಿಕ ಬಹಿರಂಗ ಹರಾಜು

ಬೆಂಗಳೂರು 29 ನೇ ಜುಲೈ (ಕರ್ನಾಟಕ ವಾರ್ತೆ):

ತೆರಿಗೆ ಪಾವತಿಸದೆ ಸಂಚರಿಸುತ್ತಿದ್ದ ವಾಹನಗಳನ್ನು ಮುಟ್ಟುಗೋಲು ಹಾಕಿದ್ದು, ಅವುಗಳನ್ನು ಜುಲೈ 30 ರಂದು ಬೆಳಿಗ್ಗೆ 11 ಗಂಟೆಗೆ ಬಹಿರಂಗ ಹರಾಜು ಮಾಡಲಾಗುವುದೆಂದು ಬೆಂಗಳೂರು ಕೇಂದ್ರ ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ತಿಳಿಸಿದ್ದಾರೆ.

ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿ, ಬೆಂಗಳೂರು (ಕೇಂದ್ರ) ರವರು ವಶಪಡಿಸಿಕೊಂಡ ವಾಹನಗಳ ಸಾರ್ವಜನಿಕ ಬಹಿರಂಗ ಹರಾಜನ್ನು ವಾಹನಗಳು, ಅವುಗಳು ಎಲ್ಲಿವೆಯೋ, ಹೇಗಿವೆಯೋ ಅದೇ ಸ್ಥಿತಿಯಲ್ಲಿ ಹರಾಜು ಹಾಕಲಾಗುವುದು.

ಹರಾಜಿನಲ್ಲಿ ಭಾಗವಹಿಸಲು ಆಸಕ್ತಿವುಳ್ಳವರು ವಾಹನ ಇರುವ ಸ್ಥಳದಲ್ಲಿ ಪರಿಶೀಲಿಸಿ ಬಹಿರಂಗ ಹರಾಜಿಲ್ಲಿ ಭಾಗವಹಿಸಬಹುದು. ಸದರಿ ವಾಹನದ ಮಾಲೀಕರ ಹೆಸರು ಹಾಗೂ ಹೆಚ್ಚಿನ ವಿವರಗಳಿಗಾಗಿ ಕಛೇರಿಯ ಸಮಯದಲ್ಲಿ ಉಪ ಸಾರಿಗೆ ಆಯುಕ್ತರು ಹಾಗೂ ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ಬೆಂಗಳೂರು(ಕೇಂದ್ರ)ದಲ್ಲಿ ಪಡೆಯಬಹುದು ಎಂದು ಪ್ರಕಟಣೆ ತಿಳಿಸಿದೆ.

**ಷರತ್ತುಗಳು:**

ಹರಾಜಿನಲ್ಲಿ ಭಾಗವಹಿಸುವವರು ರೂ. 10,000/– ಮುಂಗಡವಾಗಿ ಪಾವತಿಸಿ ರಸೀತಿ ಪಡೆಯತಕ್ಕದ್ದು. ಬಹಿರಂಗ ಹರಾಜಿನಲ್ಲಿ ಹೆಚ್ಚಿನ ಬೆಲೆಗೆ ವಾಹನವನ್ನು ಕೊಂಡವರು ಶೇಖಡ 50 ರಷ್ಟು ಹಣವನ್ನು ಸ್ಥಳದಲ್ಲಿಯೇ ಪಾವತಿಸತಕ್ಕದ್ದು. ಉಳಿದ ಬಾಕಿ ಹಣವನ್ನು ಉಪ ಸಾರಿಗೆ ಆಯುಕ್ತರು ಹಾಗೂ ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ಬೆಂಗಳೂರು (ಕೇಂದ್ರ)ದಲ್ಲಿ ಮುರು ದಿನ ಪಾವತಿಸತಕ್ಕದ್ದು. ತಪ್ಪಿದಲ್ಲಿ ಪಾವತಿಸಿದ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಹರಾಜಿನಲ್ಲಿ ಭಾಗವಹಿಸಲು ಆಸಕ್ತಿಯುಳ್ಳವರು ವಾಹನವನ್ನು ಅವುಗಳು ಇರುವ ಸ್ಥಳದಲ್ಲಿಯೇ ಹರಾಜಿಗಿಂತ ಮೊದಲೇ ಪರಿಶೀಲಿಸಬಹುದು. ಹರಾಜನ್ನು ಮುಂದುಡಲು/ರದ್ದುಪಡಿಸಲು/ತಿರಸ್ಕರಿಸುವ ತೀರ್ಮಾನ/ಹರಾಜಿಗೆ ಸಂಬಂಧಿಸಿದ ಇತರೆ ನಿರ್ಧಾರವನ್ನು ತೆಗೆದುಕೊಳ್ಳಲು ಉಪ ಸಾರಿಗೆ ಆಯುಕ್ತರು ಹಾಗೂ ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ಬೆಂಗಳೂರು(ಕೇಂದ್ರ) ಇವರಿಗೆ ಒಳಪಟ್ಟಿರುತ್ತದೆ. ಯಶಸ್ವಿ ಬಿಡ್ಡುದಾರರನ್ನು ಹೊರತುಪಡಿಸಿ ಉಳಿದವರಿಗೆ ಮುಂಗಡ ಪಾವತಿ ಹಣವನ್ನು ಸ್ಥಳದಲ್ಲಿಯೇ ವಾಪಸ್ಸು ನೀಡಲಾಗುವುದು.

## ಕಲಾವಿದರಿಗೆ ಧನ ಸಹಾಯ ಕೋರಿ
## ಪ್ರವಾಸೋದ್ಯಮ ಸಚಿವರಿಂದ ಮುಖ್ಯಮಂತ್ರಿಗಳಿಗೆ ಮನವಿ

**ಬೆಂಗಳೂರು 29 ನೇ ಜುಲೈ(ಕರ್ನಾಟಕ ವಾರ್ತೆ):**

PÉÆgÉÆÃ£Á ¸ÁAPÁæ«ÄPÀ gÉÆÃUÀzÀ (ಕೋವಿಡ್-19) ಪರಿಣಾಮದಿಂದಾಗಿ ರಾಜ್ಯವು ತತ್ತರಿಸಿದ್ದು, ಇದರಿಂದಾಗಿ ವೃತ್ತಿ ರಂಗಭೂಮಿ ಕಲಾವಿದರು, ಸಹಕಲಾವಿದರು, ಸಿನಿಮಾ ಸಹ ಕಲಾವಿದರು ಇತ್ಯಾದಿ ಕ್ಷೇತ್ರದಲ್ಲಿನ ಸಹಕಲಾವಿದರಿಗೆ ಆರ್ಥಿಕ ನೆರವು ನೀಡುವಂತೆ ಕೋರಿ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಸಿ.ಟಿ. ರವಿ ಅವರು ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ್ದಾರೆ.

ಸರ್ಕಾರದಿಂದ ಧನ ಸಹಾಯ ಕೋರಿ ಅನೇಕ ರಂಗದ ಮುಖಂಡರು ಸಚಿವರಿಗೆ ಸಹಾಯ ಮಾಡುವಂತೆ ಕೋರಿ ಅರ್ಜಿ ಸಲ್ಲಿಸಿದ್ದರು.

ಸಹಾಯ ಧನ ಕೋವಿಡ್-19 ಪರಿಣಾಮದಿಂದಾಗಿ ವೃತ್ತಿ ರಂಗಭೂಮಿ ಕಲಾವಿದರು, ಸಹಕಲಾವಿದರು, ಸಿನಿಮಾ ಸಹ ಕಲಾವಿದರು ಇತ್ಯಾದಿ ಕ್ಷೇತ್ರದಲ್ಲಿನ ಸಹಕಲಾವಿದರಿಗೆ ಕಳೆದ 5 ತಿಂಗಳಿನಿಂದ ಯಾವುದೇ ನೆರವು ಇಲ್ಲದೇ ತೀವ್ರ ಸಂಕಷ್ಟಕ್ಕೀಡಾಗಿರುತ್ತಾರೆ. ವಿವಿಧ ಕ್ಷೇತ್ರಗಳಲ್ಲಿ ಸಂಕಷ್ಟಕ್ಕೀಡಾದವರಿಗೆ ಸರ್ಕಾರವು ಈಗಾಗಲೇ ಒಂದುಬಾರಿಯ ಆರ್ಥಿಕ ನೆರವನ್ನು ಘೋಷಿಸಿದ್ದು, ಅದರಂತೆಯೇ ವೃತ್ತಿರಂಗಭೂಮಿ ಹಾಗೂ ಸಿನಿಮಾ ಸಹಕಲಾವಿದರಿಗೆ ಒಂದುಬಾರಿಯ ಆರ್ಥಿಕ ನೆರವನ್ನು ತಲಾ ರೂ.5000 ಗಳಂತೆ ಘೋಷಿಸಲು ಕೋರಿದೆ.

ಕೋವಿಡ್-19ರ ಪರಿಣಾಮದಿಂದ ಮುಚ್ಚಲ್ಪಟ್ಟಿರುವ ಜಿಮ್ ಮತ್ತು ಫಿಟ್‌ನೆಸ್ ಸೆಂಟರ್‌ಗಳನ್ನು ತೆರೆಯಲು ಇದುವರೆಗೆ ಅನುಮತಿ ನೀಡದಿರುವುದರಿಂದ ಇಲ್ಲಿರುವ ತರಬೇತುದಾರರು, ಕೆಲಸಗಾರರು ತೀವ್ರವಾಗಿ ಸಂಕಷ್ಟಕ್ಕೆ ಈಡಾಗಿರುತ್ತಾರೆ. ಆದ್ದರಿಂದ ಸದರಿ ಜಿಮ್ ಮತ್ತು ಫಿಟ್‌ನೆಸ್ ಸೆಂಟರ್‌ಗಳನ್ನು ತೆರೆಯಲು ಅನುಮತಿ ನೀಡುವವರೆಗೆ ಅಥವಾ ಒಂದು ಬಾರಿ ಸದರಿಯವರಿಗೆ ಆರ್ಥಿಕ ನೆರವು ಘೋಷಿಸುವಂತೆ ಹಾಗೂ ಜಿಮ್ ಮತ್ತು ಫಿಟ್‌ನೆಸ್ ಸೆಂಟರ್‌ಗಳ ಮೇಲೆ ವಿಧಿಸುವ ಜಿ.ಎಸ್.ಟಿ ತೆರಿಗೆ ಕೈಬಿಡುವಂತೆ ಹಾಗೂ ಸಾಲವಸೂಲಾತಿ ಅವಧಿಯನ್ನು ಮುಂದೂಡುವಂತೆ, ವಿದ್ಯುತ್ ಬೇಡಿಕೆ ಶುಲ್ಕ ಹಾಗೂ ಕನಿಷ್ಠ ಶುಲ್ಕವನ್ನು ಈ ಅವಧಿಗೆ ವಿಧಿಸದಂತೆ ಸಂಬಂಧಪಟ್ಟವರಿಗೆ ಸೂಚಿಸಲು ಕೋರಿದೆ.

ಕೋವಿಡ್-19ರ ಪರಿಣಾಮದಿಂದ ಪ್ರವಾಸೋದ್ಯಮ ಹಾಗೂ ಹೋಟೆಲ್ ಉದ್ಯಮವು ಸಂಪೂರ್ಣವಾಗಿ ನೆಲಕಚ್ಚಿದ್ದು ಈ ಉದ್ಯಮದ ಪುನಶ್ಚೇತನಕ್ಕೆ ಸರ್ಕಾರದಿಂದ ತುರ್ತಾಗಿ ಕ್ರಮವಹಿಸಬೇಕಿದೆ. ಮಾರ್ಚಿ-20 ರಿಂದ ಕನಿಷ್ಟ 1 ವರ್ಷದ ವರೆಗೆ ಜಿ.ಎಸ್.ಟಿ ಹಾಗೂ ಇತರೆ ತೆರಿಗೆಗಳಲ್ಲಿ ತೆರಿಗೆ ರಜೆ ನೀಡುವುದು, ಬ್ಯಾಂಕ್‌ಗಳಿಂದ ಪಡೆದ ಸಾಲ ಮರುಪಾವತಿಯ ಮುಂದೂಡಿಕೆ ಹಾಗೂ ಬಡ್ಡಿಯ ಧರದಲ್ಲಿ 1/3 ರಷ್ಟು ಕಡಿತಗೊಳಿಸುವುದು. ರಾಜ್ಯಾದ್ಯಂತ ಇರುವ ಹೋಟೆಲ್, ರೆಸ್ಟೋರೆಂಟ್ಸ್‌ಗಳಿಗೆ ವಿಧಿಸಲಾಗುತ್ತಿರುವ ವಿದ್ಯುತ್ ಡಿಮ್ಯಾಂಡ್ ಶುಲ್ಕವನ್ನು ಕನಿಷ್ಟ 1 ವರ್ಷಕಡಿತಗೊಳಿಸುವುದು. ಹೋಟೆಲ್ ಉದ್ಯಮದಲ್ಲಿ ತೊಡಗಿರುವ ಎಲ್ಲಾ ವರ್ಗದ ಪ್ರವಾಸಿ ಗೈಡ್, ಕೆಲಸಗಾರರು, ಅರೆವೇತನ ಸಿಬ್ಬಂದಿಗಳಿಗೆ ಒಂದು ಬಾರಿಯ ಆರ್ಥಿಕ ನೆರವನ್ನು ಘೋಷಿಸುವ ಮೂಲಕ ಮೇಲ್ಕಂಡವರ ನೆರವಿಗೆ ಸರ್ಕಾರವು ನಿಲ್ಲಬೇಕಿದ್ದು ಈ ಬಗ್ಗೆ ತುರ್ತು ಅಗತ್ಯಕ್ರಮವಹಿಸಲು ಮನವಿಯಲ್ಲಿ ಕೋರಿದ್ದಾರೆ.

## ಚಿತ್ರ ಸುದ್ದಿಗಳು

**ಬೆಂಗಳೂರು 29 ನೇ ಜುಲೈ(ಕರ್ನಾಟಕ ವಾರ್ತೆ):**

ವಾಲ್ಮೀಕಿ ಸಮಾಜದ ಪ್ರಸನ್ನಾನಂದ ಸ್ವಾಮೀಜಿ ನೇತೃತ್ವದಲ್ಲಿ ಇಂದು ಸಮಾಜದ ಪ್ರಮುಖರು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಮನವಿ ಪತ್ರ ಸಲ್ಲಿಸಿದರು. ಈ ಸಮಯದಲ್ಲಿ ಜಲಸಂಪನ್ಮೂಲ ಸಚಿವ ಸತೀಶ್ ಜಾರಕಿಹೊಳಿ ಮತ್ತಿತರರು ಉಪಸ್ಥಿತರಿದ್ದರು.

**ಛಾಯಾಚಿತ್ರ ಲಗತ್ತಿಸಿದೆ)**

ಬೆಂಗಳೂರು, 29 ನೇ ಜುಲೈ(ಕರ್ನಾಟಕ ವಾರ್ತೆ):

ಬೆಂಗಳೂರು ಲೈಫ್ ಸೈನ್ಸ್ ಪಾರ್ಕ್‌ಗೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಇಂದು ಭೂಮಿ ಪೂಜೆ ನೆರವೇರಿಸಿದರು.

ಉಪಮುಖ್ಯಮಂತ್ರಿ ಡಾ. ಸಿ.ಎಸ್.ಅಶ್ವತ್ಥ್‌ನಾರಾಯಣ್, ಶಾಸಕ ಎಸ್.ಆರ್.ವಿಶ್ವನಾಥ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ಛಾಯಾಚಿತ್ರ ಲಗತ್ತಿಸಿದೆ)**

**ಪ್ರಥಮ ಮುದ್ರಣವಾಗಿ ಪ್ರಕಟಗೊಂಡ ಪುಸ್ತಕಗಳನ್ನು ಆಯ್ಕೆ ಸಮಿತಿಗೆ ಸಲ್ಲಿಸಲು ಅವಧಿ ವಿಸ್ತರಣೆ**

ಬೆಂಗಳೂರು, 29 ನೇ ಜುಲೈ (ಕರ್ನಾಟಕ ವಾರ್ತೆ):

ಕೋವಿಡ್ – 19 ವೈರಸ್ ಹರಡುವಿಕೆಯಿಂದ ರಾಜ್ಯಾದ್ಯಂತ ಲಾಕ್‌ಡೌನ್ ಜಾರಿಯಾದ ಕಾರಣ, 2020ನೇ ಸಾಲಿನಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟವಾದ ಪುಸ್ತಕಗಳನ್ನು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಗೆ ಆಯ್ಕೆಗಾಗಿ ಸಲ್ಲಿಸುವ ಅವಧಿಯನ್ನು ಲೇಖಕರು, ಲೇಖಕ–ಪ್ರಕಾಶಕರು ಹಾಗೂ ಪ್ರಕಟಣಾ ಸಂಸ್ಥೆಗಳ ದೂರವಾಣಿ ಮನವಿ ಮೇರೆಗೆ ದಿನಾಂಕ ವಿಸ್ತರಿಸಲಾಗಿದೆ.

ಪುಸ್ತಕಗಳನ್ನು ಆಯ್ಕೆಗಾಗಿ, ಉಪನಿರ್ದೇಶಕರ ಕಚೇರಿ, ನಗರ ಕೇಂದ್ರ ಗ್ರಂಥಾಲಯ, ಪಶ್ಚಿಮ ವಲಯ, ಹಂಪಿನಗರ, ಬೆಂಗಳುರು – 560 104 ಇಲ್ಲಿ ದಿನಾಂಕ: 29–08–2020ರೊಳಗೆ ಕಾಪಿರೈಟ್ ಮಾಡಿಸಿರತಕ್ಕದ್ದು. ಕಾಫಿರೈಟ್ ಮಾಡಿಸಿದ ಪುಸ್ತಕಗಳನ್ನು ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿಗೆ ಆಯ್ಕೆಗಾಗಿ ಅರ್ಜಿಯೊಂದಿಗೆ ಪುಸ್ತಕದ ಒಂದು ಪ್ರತಿಯನ್ನು ದಿನಾಂಕ: 31–08–2020ರಒಳಗೆ ಸಲ್ಲಿಸುವುದು. ನಿಗದಿತ ಅರ್ಜಿ ನಮೂನೆ ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಇಲಾಖಾ ಅಂತರ್ಜಾಲ

www.karnatakapubliclibrary.gov.in ಹಾಗೂ ರಾಜ್ಯದ ಎಲ್ಲಾ ಜಿಲ್ಲಾ / ನಗರ ಕೇಂದ್ರ ಗ್ರಂಥಾಲಯಗಳ ಉಪನಿರ್ದೇಶಕರು / ಮುಖ್ಯ ಗ್ರಂಥಾಲಯಾಧಿಕಾರಿಗಳ ಕಛೇರಿಯಲ್ಲಿ ಪಡೆಯಬಹುದು. ಹಾಗೂ ದೂರವಾಣಿ ಸಂ. 080–22864990, 22867358 ನ್ನು ಸಂಪರ್ಕಿಸಬಹುದು ಎಂದು ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.